ಒ.ಎಸ್. ನಂ.51/2023
ಪಿಡಬ್ಲು-2

ದಿನಾಂಕ 12.12.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

ಪಾಟಿ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ

ದಾವಾಸ್ತಿಯ ಸರ್ವೆ ನಂಬರ ನನಗೆ ಗೊತ್ತಿಲ್ಲ. ದಾವಾಸ್ತಿ ಕೃಷಿಯೇತರ ನಿವೇಶವಿದೆ ಎಂದರೆ ಸರಿ. ಸರ್ವೆ ನಂ.51 ರಲ್ಲಿ ಎಷ್ಟು ನಿವೇಶನಗಳಿವೆ ಎಂದು ನನಗೆ ಗೊತ್ತಿಲ್ಲ. 1ನೆ ಪ್ರತಿವಾದಿಯ ಹೆಸರಿನಲ್ಲಿರುವ ಪ್ಲಾಟ ನಂಬರ ನನಗೆ ಗೊತ್ತಿಲ್ಲ. 1ನೆ ಪ್ರತಿವಾದಿಯ ನಿವೇಶನ 30 x 40 ಇರುತ್ತದೆ ಎಂದರೆ ಸರಿ. 1ನೆ ಪ್ರತಿವಾದಿಯು ತಮ್ಮ ಪ್ಲಾಟನ್ನು ನೊಂದಾಯಿತ ಖರೀದಿ ಮಾಡಿಕೊಂಡಿರುತ್ತಾರೆ ಎಂದರೆ ಸರಿ. 1ನೆ ಪ್ರತಿವಾದಿಯು ಪುರಸಭೆಯಿಂದ ಪರವಾನಿಗೆ ಪಡೆದು ಕಟ್ಟಡ ಕಟ್ಟಿರುತ್ತಾರೆ ಎಂದರೆ ಸರಿ. 1ನೆ ಪ್ರತಿವಾದಿಯ ಪಡೆದ ಕಟ್ಟಡ ಪರವಾನಿಗೆಯನ್ನು ಪ್ರಶ್ನಿಸಿ ನಾವು ತಕರಾರು ಮಾಡಿಲ್ಲ ಎಂದರೆ ಸರಿ. ನಾನು ದಾವಾಸ್ತಿಯ ಸುತ್ತ ಮುತ್ತಲಿನ ಪ್ಲಾಟುಗಳನ್ನು ಸೇರಿ ಸಂಗಣ್ಣ ಜೆ.ಇ. ರವರ ಮುಖಾಂತರ ಅಳತೆ ಮಾಡಿಸಿರುತ್ತೇವೆ. ಈ ಕುರಿತು ದಾಖಲೆಗಳನ್ನು ಸಲ್ಲಿಸಿರುತ್ತೇನೆ. ನಾವು ಯಾವ ಪ್ಲಾಟುಗಳನ್ನು ಅಳತೆ ಮಾಡಿರುತ್ತೇವೆ ಎಂದು ನನಗೆ ಗೊತ್ತಿಲ್ಲ. ವಾದಿಯು ಮೂರುವರೆ ಪೂಟು ಜಾಗ ಹೋಗಿರುತ್ತದೆ ಎಂದು ಈ ದಾವೆ ಸಲ್ಲಿಸಿರುತ್ತಾರೆ. ವಾದಿಯು ಲೇ ಔಟ ಮಾಲಿಕರಿಗೆ ಅತಿಕ್ರಮಣವಾದ ಬಗ್ಗೆ ಅರ್ಜಿಯನ್ನು ನೀಡಿರುತ್ತಾರೆ. ಪ್ರತಿವಾದಿಯರು ಯಾವ ವರ್ಷ ಅತಿಕ್ರಮಣ ಮಾಡಿ ಕಟ್ಟಡ ಕಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

ಸಾಮಾನ್ಯವಾಗಿ ಒಂದು ಮನೆ ಕಟ್ಟಬೇಕಾದರೆ ಒಂದರಿಂದ ಒಂದುವರೆ ವರ್ಷ ಬೇಕಾಗುತ್ತದೆ ಎಂದರೆ ಸರಿ. ಪ್ರತಿವಾದಿಯು ಈಗಾಗಲೇ ಮನೆ ಕಟ್ಟಿ 8-10 ವರ್ಷಗಳಿಂದ ವಾಸವಾಗಿರುತ್ತಾರೆ ಎಂದರೆ ಸರಿ. ಪ್ರತಿವಾದಿಯರು ಯಾವುದೆ ಅತಿಕ್ರಮಣ ಮಾಡದೆ ತಮ್ಮ ಜಾಗದಲ್ಲಿ ಮನೆ ಕಟ್ಟಿರುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದಿಯು ಮೂರುವರೆ ಪೂಟು ಜಾಗವನ್ನು ಅತಿಕ್ರಮಣ ಮಾಡಿ ಮನೆ ಕಟ್ಟಿರುತ್ತಾರೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಒತ್ತುವರಿಯಾದ ಬಗ್ಗೆ ನಾವು ಯಾವುದೆ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಲೈ ಔಟನ ಎಲ್ಲಾ ಪ್ಲಾಟುಗಳನ್ನು ಅಳತೆ ಮಾಡಿಸದ ಹೊರತು ಅತಿಕ್ರಮಣವಾದ ಬಗ್ಗೆ ರುಜುವಾತು ಆಗುವುದಿಲ್ಲ ಎಂದರೆ ಸಾಕ್ಷಿ ನಾನು ನಾಲ್ಕು ಸಾರಿ ಅಳತೆ ಮಾಡಿಸಿರುತ್ತೇವೆ ಎಂದು ಹೇಳುತ್ತಾರೆ. ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ
(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೆ. ಸರಿ ಇದೆ

ಸಿವಿಲ್ ನ್ಯಾಯಾಧೀಶರು
ಜೇವರ್ಗಿ